ಕರ್ನಾಟಕ ವಿಧಾನ ಸಭೆ

ಮಂಗಳವಾರ 27ನೇ ಮಾರ್ಚ್ 2007 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 : 58 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಕೃಷ್ಣರವರು ಪೀಠವನ್ನು ಅಲಂಕರಿಸಿದ್ದರು.

(ಸದನದ ಕಲಾಪವು ಸಮಯ ಬೆಳಿಗ್ಗೆ 10 : 58 ಕ್ಕೆ ಪ್ರಾರಂಭವಾಯಿತು.
ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು : ಮಾನ್ಯ ಹೆಗ್ಡೆಯವರೆ, ವರದಿಯನ್ನೊಪ್ಪಿಸಿ.

1. ವರದಿಯನ್ನೊಪ್ಪಿಸುವುದು

ವಿಷಯ :– ಅಂದಾಜು ಸಮಿತಿಯ 3 ನೇ ವರದಿ.

ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) :– ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಸಭೆಯ 2006 –07 ನೇ ಸಾಲಿನ ಅಂದಾಜು ಸಮಿತಿಯ ಅಧ್ಯಕ್ಷನಾದ ನಾನು ಆರ್ಥಿಕ ಇಲಾಖೆಗೆ ಸಂಬಂಧಿಸಿದ 3 ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು :– ವರದಿಯನ್ನೊಪ್ಪಿಸಲಾಯಿತು. ಈಗ ವಿತ್ತೀಯ ಕಾರ್ಯಕಲಾಪ. 2007– 08 ನೇ ಸಾಲಿನ ಆಯವ್ಯಯ ಅಂದಾಜುಗಳ ಕುರಿತು ಸಾಮಾನ್ಯ ಚರ್ಚೆ.

ಶ್ರೀ ಎನ್. ಧರ್ಮಸಿಂಗ್ :– ಮಾನ್ಯ ಅಧ್ಯಕ್ಷರೇ, ಇವತ್ತು ಪ್ರಶ್ನೋತ್ತರ ನಂತರ Zero hour ಇಟ್ಟಿದ್ದೀರಿ.

ಅಧ್ಯಕ್ಷರು :– ಇಲ್ಲ ಪ್ರಶ್ನೋತ್ತರದ ಕೊನೆಯಲ್ಲಿ. . . .

ಶ್ರೀ ಎನ್. ಧರ್ಮಸಿಂಗ್ :– ಅದು ಆದಮೇಲೆ ಇಟ್ಟಿದ್ದೀರಿ. ಆದರೆ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ನಿನ್ನೆ ಮತ್ತು ಇವತ್ತು ಘಟನೆ ಏನಾಗಿದೆ Zero hour ಪ್ರಾರಂಭದಲ್ಲಿ ಇದ್ದರೆ ಪ್ರಸ್ತಾಪ ಮಾಡುವುದಕ್ಕೆ ಅನುಕೂಲವಾಗುತ್ತಿತ್ತು.

ಅಧ್ಯಕ್ಷರು :– ಮಧ್ಯಾಹ್ನ ಊಟವಾದ ಮೇಲೆ ತೆಗೆದುಕೊಳ್ಳೋಣ ಸಾರ್. Agenda. . . .ಪ್ರಕಾರ ಇಲ್ಲದೇ ಇದ್ದರೆ ಈ ವಿಚಾರ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆ ಸಂಜೆಯಾದರೆ ಅಷ್ಟು ಚೆನ್ನಾಗಿ ಇರುವುದಿಲ್ಲ. ದಯಮಾಡಿ ಎರಡೆರಡು ನಿಮಿಷ ಕೊಡುವುದರ ಮೂಲಕ ಇದಕ್ಕೆ ಪ್ರಾಮುಖ್ಯತೆ ಕೊಡಿ. ಈಗ ಕಾವೇರಿ ಬಗ್ಗೆ ....

ಅಧ್ಯಕ್ಷರು :– ಕೇಳಿ Lunch ಆದಮೇಲೆ ಸೇರುತ್ತೇವಲ್ಲ ಆಗ ಕೊಡೋಣ. ಈಗ ಇದನ್ನು ಆರಂಭ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ :– ಎರಡು ನಿಮಿಷ, ಜಾಸ್ತಿ ಸಮಯ ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು :– ನಿಮ್ಮದು ಎರಡು ಸ್ವಾಮಿ, ಅವರು ಎರಡು ನಿಮಿಷ ಎಂದರೆ ಹೀಗೆ ಬಹಳ ಜನರದ್ದು ಇದೆ. ಅದು ಗಂಟೆಗಟ್ಟಲೆ ಆಗಿಬಿಡುತ್ತದೆ.

ಶ್ರೀ ವಾಟಾಳ್ ನಾಗರಾಜ್ :– ಇಲ್ಲ ಸಾರ್, ಗಂಟೆಗಟ್ಟಲೆ ಮಾಡುವುದಿಲ್ಲ. ಯಡಿಯೂರಪ್ಪನವರೇ ಒಂದು ನಿಮಿಷ, ದಯವಿಟ್ಟು, ನಿಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಸನ್ಮಾನ್ಯ ಅಧ್ಯಕ್ಷರೇ, ತಾವು ಮಾತನಾಡಿ, ನಾನು ಒಂದು ನಿಮಿಷ ಮಾತನಾಡುತ್ತೇನೆ. ಇವತ್ತು ಬಹಳ ಪ್ರಮುಖವಾಗಿ 2007 – 08 ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಕುರಿತು ಸಾಮಾನ್ಯ ಚರ್ಚೆಯನ್ನು ಪ್ರತಿಪಕ್ಷದ ನಾಯಕರು ಪ್ರಾರಂಭ ಮಾಡಬೇಕು. ಇದು ಅತ್ಯಂತ ಮಹತ್ವವಾದುದು. ಇವತ್ತು ಈಗಾಗಲೇ 27 ನೇ ತಾರೀಖು ಆಗಿದೆ. ಇದನ್ನು 29 ನೇ ತಾರೀಖಿನ ದಿವಸ ಪಾಸ್ ಮಾಡಿ ಆ ಮನೆಗೆ ಕಳುಹಿಸಿಕೊಡಬೇಕು. ಆದುದರಿಂದ ಶೂನ್ಯವೇಳೆಯಲ್ಲಿ ಆಮೇಲೆ ತೆಗೆದುಕೊಳ್ಳಬಹುದು. ಮಾನ್ಯ ವಿರೋಧ ಪಕ್ಷದ ನಾಯಕರು ಮೊದಲು ಈ ಒಂದು ಆಯವ್ಯಯಕ್ಕೆ ಹೆಚ್ಚು ಮಹತ್ವ ಕೊಟ್ಟು ಚರ್ಚೆ ಪ್ರಾರಂಭ ಮಾಡಿದರೆ ಒಳ್ಳೆಯದು. ಇದು ನಡೆದುಕೊಂಡ ಬಂದಿರುವ ಸತ್ಸಂಪ್ರದಾಯ. ಈಗ ಬೇರೆ ಎಲ್ಲಾ ಕಾರ್ಯಕಲಾಪ ಬದಿಗೊತ್ತಿ ಅದಕ್ಕೆ ಮಹತ್ವ ಕೊಡಬೇಕು.

ಆದುದರಿಂದ ಪ್ರತಿಪಕ್ಷದ ನಾಯಕರು ಚರ್ಚೆ ಪ್ರಾರಂಭ ಮಾಡಲಿ. ಮಧ್ಯಾಹ್ನದ ನಂತರ ಯಾವುದೇ ಒಂದು ಸಮಯವನ್ನು ನಿಶ್ಚಯ ಮಾಡಿ ದಯವಿಟ್ಟು ಶೂನ್ಯವೇಳೆಗೆ ಅವಕಾಶವನ್ನು ಮಾಡಿಕೊಡಿ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ, ನಾನು ಒಂದೂವರೆ ನಿಮಿಷಕ್ಕಿಂತ ಮುಂದು ಹೋದರೆ, ನೀವು ಲೆಕ್ಕ ಹಾಕಿಬಿಡಿ, ಎರಡು ನಿಮಿಷವೂ ಬೇಡ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗಿದೆಯೆಂದರೆ procedures ಎಲ್ಲಾ ರಿವರ್ಸ್ ಆಗಿದೆ. Generally first is the question hour. Parliament ನಲ್ಲಿರುವ ಪದ್ಧತಿಯು ಅಷ್ಟೆ, House of commons ನಲ್ಲೂ ಕೂಡ ಅಷ್ಟೆ. Question hour ಆದ ತಕ್ಷಣ it is presumed to be zero hour. ಅದರಲ್ಲಿ ಹೇಳುವ, ಕೇಳುವ ಪ್ರಶ್ನೆ ಇಲ್ಲ. ಹಿಂದಿನ ದಿವಸ ಸದನದ ಅಧಿವೇಶನ ಮುಕ್ತಾಯವಾದ ಮೇಲೆ, ನಡೆದಿರಬಹುದಾದಂತಹ ಬಹಳ ಪ್ರಾಮುಖ್ಯವಾದಂತಹ ಘಟನೆಗಳು ಯಾವುದನ್ನು ಹಿಂದಿನ ದಿವಸ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಸಿಕ್ಕಿರುವುದಿಲ್ಲವೋ, ಬೆಳಿಗ್ಗೆ time ಗೆ correct ಆಗಿ Notice ಕೊಡುವುದಕ್ಕೆ ಅವಕಾಶವಿದೆ. ಅಂತಹ ಪ್ರಮುಖವಾದಂಥ ವಿಚಾರವನ್ನು ತಮ್ಮ ಅನುಮತಿ ಪಡೆದು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಪ್ರತಿ ದಿವಸ ಇರಲೇ ಬೇಕು. ಏಕೆಂದರೆ ಅಂತಹ ಘಟನೆಗಳು ನಡೆಯುತ್ತಿರುತ್ತವೆ. ಸದನ ಅಧಿವೇಶನದಲ್ಲಿದ್ದಾಗ, ಅಂತಹ ವಿಷಯಗಳು ಪ್ರಸ್ತಾಪವಾಗದೇ ಹೋದರೆ, ಅದು ಸಾರ್ವಜನಿಕ ಕರ್ತವ್ಯಲೋಪವಾಗುತ್ತದೆ. ತಾವು ಈಗ ಏನು ಮಾಡುತ್ತಿದ್ದೀರಿ, ಎಂದರೆ First discussion ಅನ್ನು ಇಟ್ಟುಕೊಳ್ಳುತ್ತಿದ್ದೀರಿ. Zero Hour ಎಂದರೆ Question hour ಆದಮೇಲೆ ಬರಬೇಕು. ತಾವು question hour ಅನ್ನು ಸಂಜೆ 6 ಗಂಟೆ, 7 ಗಂಟೆಗೆ ತೆಗೆದುಕೊಳ್ಳುತ್ತೀರಿ, ಆಮೇಲೆ Zero Hour ಅಂದರೆ, ಅದಕ್ಕೆ ಇರುವಂಥ ಮಾನ್ಯತೆ ಹೋಗುತ್ತದೆ. Secretariat ನವರು should help you. ಅಥವಾ ಅದಕ್ಕೆ ಯಾವುದಾದರೂ ಒಂದು ಸಮಯವನ್ನು ನಿಗದಿ ಮಾಡಿ. ಇಲ್ಲಿ ಒಂದು ಸಮಯವನ್ನು

ನಿಗದಿ ಮಾಡಿ. Mentioning ಎಂದು ಇಟ್ಟುಕೊಳ್ಳಿ, Zero Hour ಎಂದು ಕರೆಯುವುದು ಬೇಡ, mention ಮಾಡುವುದಕ್ಕಾದರೂ ಅವಕಾಶ ಮಾಡಿಕೊಡಿ.

ಅಧ್ಯಕ್ಷರು :– ಆಯಿತು, ಕೊಡುತ್ತೇನೆ, ಆದರೆ Lunch ಆದ ಮೇಲೆ ಕೊಡೋಣ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ಮಾನ್ಯ ಅಧ್ಯಕ್ಷರೆ, ಇವತ್ತು Question hour ಇದೆಯೋ, ಇಲ್ಲವೋ?

ಅಧ್ಯಕ್ಷರು :– ಸಾಯಂಕಾಲ ಇದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ನಾನು ಏನು ಹೇಳುತ್ತೇನೆಂದರೆ Question hour ಅನ್ನು ಏಕೆ ಸಂಜೆಗೆ ಹಾಕುತ್ತೀರಿ. ನೀವು ಮಾಡತಕ್ಕಂಥ ಬುದ್ಧಿವಂತಿಕೆ ಏನು? Question hour ಆಗಲೇಬೇಕು.

ಅಧ್ಯಕ್ಷರು :– ಬಿಎಸಿ ಮೀಟಿಂಗ್‌ನಲ್ಲಿ ತೀರ್ಮಾನವಾಗಿದೆ. ಪ್ರಶ್ನೋತ್ತರವನ್ನು ಕೊನೆಯಲ್ಲಿ ಹಾಕಿಕೊಳ್ಳೋಣ, ಬಜೆಟ್ ನಂತರ ಆಗಬೇಕೆಂದು ಆಗಿದೆ. ಆಗ ನೀವು ಇದ್ದಿರೋ, ಇಲ್ಲವೋ ಗೊತ್ತಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : – They very fervour, Sanctity and charm in question hour is almost lost, you see, if you don't take it in the first hour.

ಅಧ್ಯಕ್ಷರು :– ಅದನ್ನು ತಾವೇ ಬಿಎಸಿಯಲ್ಲಿ ತೀರ್ಮಾನ ಮಾಡಿರುವುದು.

ಶ್ರೀ ಹೆಚ್. ಆಂಜನೇಯ :– ಮಾನ್ಯ ಅಧ್ಯಕ್ಷರೆ, ಪ್ರತಿ ದಿವಸ ಪ್ರಶ್ನೋತ್ತರ ವೇಳೆಯನ್ನು ಬೆಳಿಗ್ಗೆಯೇ ತೆಗೆದುಕೊಳ್ಳದೇ ಹೋದರೆ, ಎಷ್ಟೊ ನಮ್ಮ ಹಕ್ಕುಗಳ ಹರಣವಾಗುತ್ತದೆ. ಒಂದು ಸಾರಿ ಇವರಿಗೆ ಅನುಕೂಲವಾದ ಹಾಗೆ, Question hour ಅನ್ನು ಆಮೇಲೆ ಮಾಡಿ ಎಂದು ಬೇರೆ ವಿಷಯವನ್ನು ಚರ್ಚೆ ಮಾಡುತ್ತಾರೆ. ಅವರಿಗೆ ಅನುಕೂಲವಾದಾಗ ಪ್ರಶ್ನೋತ್ತರ ಎಂದು ಹೇಳುತ್ತಾರೆ. ತಾವು ಪ್ರಶ್ನೋತ್ತರವನ್ನು ಬೆಳಿಗ್ಗೆ ತೆಗೆದುಕೊಳ್ಳಿ. ನಮಗೆಲ್ಲಾ ಅನುಕೂಲವಾಗುತ್ತದೆ. ನಾವು ಪ್ರಶ್ನೆಯನ್ನು ಕೇಳಿರುತ್ತೇವೆ, ನಮಗೆ ಮಾತನಾಡುವುದಕ್ಕೆ ಅವಕಾಶವೇ ಸಿಗುವುದಿಲ್ಲ.

ಅಧ್ಯಕ್ಷರು :– ಆಯಿತು.

ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ :– ಮಾನ್ಯ ಅಧ್ಯಕ್ಷರೆ, ನನ್ನದು ಗಮನ ಸೆಳೆಯುವ ಸೂಚನೆ ಇದೆ.

ಅಧ್ಯಕ್ಷರು :– ಆಯಿತು.

2) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ಕಾವೇರಿ ನ್ಯಾಯಮಂಡಳಿ ತೀರ್ಪಿನ ಬಗ್ಗೆ :–

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ, ಫೆಬ್ರವರಿ 5 ನೇ ತಾರೀಖಿನಂದು ಕಾವೇರಿ ನದಿ ನೀರಿನ ವಿಚಾರವಾಗಿ ತೀರ್ಪು ಬಂತು. ಇವತ್ತಿಗೆ 50 ದಿವಸಗಳಾಯಿತು. ಇಡೀ ರಾಜ್ಯದಲ್ಲಿ ನಾನಾ ರೀತಿಯಲ್ಲಿ ಕಾವೇರಿ ತೀರ್ಪಿನಿಂದ ಅನ್ಯಾಯವಾಗಿದೆಯೆಂದು ಹೇಳಿ, ಇಡೀ ರಾಜ್ಯದ ಉದ್ದಗಲಕ್ಕೂ ಸಮಗ್ರವಾಗಿ ನಾನಾ ಕನ್ನಡ ಸಂಘಸಂಸ್ಥೆಗಳು, ಅಖಿಲ ಕರ್ನಾಟಕ ಗಡಿನಾಡ ಹೋರಾಟ ಸಮಿತಿ ತೀವ್ರವಾದಂಥ ಹೋರಾಟವನ್ನು ಮಾಡಿದೆ. ಆ ಹೋರಾಟಗಾರರಿಗೆ ಈ ಸಭೆಯ ಮೂಲಕ ಅಭಿನಂದನೆಯನ್ನು ಸಲ್ಲಿಸುವುದರ ಜೊತೆಗೆ, ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳುತ್ತಿದ್ದೇನೆ, ಈಗ ಸದನದಲ್ಲಿ ಮಾನ್ಯ ಜಲಸಂಪನ್ಮೂಲ ಮಂತ್ರಿಗಳು ಇದ್ದಾರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಇದ್ದಾರೆ, ಮಾನ್ಯ ಮುಖ್ಯಮಂತ್ರಿಯವರು ಈಗ ಸದನದಲ್ಲಿ ಇಲ್ಲ, ಅವರು ಬರಲಿ, ನಮ್ಮದು ಏನೂ ಅಭ್ಯಂತರವಿಲ್ಲ. ಸರ್ಕಾರ ಇದುವರೆಗೂ ಏನು ಮಾಡಿದೆ? ಏನು ತೀರ್ಮಾನ ಮಾಡಿದ್ದೀರಿ? ಇಲ್ಲಿ ಒಂದು ನಿರ್ಣಯವಾಯಿತು. ಇದು ಆದಮೇಲೆ ಎರಡು ಸರ್ವ ಪಕ್ಷಗಳ ಸಭೆ ಆಯಿತು. ಅದು ಆದ ಮೇಲೆ, ಲೋಕಸಭಾ ಸದಸ್ಯರ ಸಭೆ ಆಯಿತು. ಇಡೀ ರಾಜ್ಯದ ಜನ ಈ ಕಡೆಗೆ ತಿರುಗಿದರು. ಸರ್ಕಾರ ಏನು ಮಾಡಿದೆ? ಸರ್ಕಾರದ ನಿಲುವು ಏನು? ಏನು ಮಾಡಿದ್ದೀರಿ? ಏನಾದರೂ ಒಂದು ವಿಷಯವನ್ನು ರಾಜ್ಯದ ಜನತೆಗೆ ಹೇಳಬೇಕಲ್ಲಾ. . . .

ಅಧ್ಯಕ್ಷರು :– ಮಾನ್ಯ ಕೆ. ಎಸ್. ಈಶ್ವರಪ್ಪನವರೆ, ಹೇಳಿ.